ಕೈಗೆ ಬಂದರಾಯಿತು' ಎಂದುಕೊಳ್ಳುತ್ತಾ ಕೆಲಸ ಮಾಡಿಕೊಂಡಿದ್ದಳು.

ಮಳೆಗಾಲ ಬಿಟ್ಟರೆ ಉಳಿದಂತೆ ಆ ಊರು ಮತ್ತದರ ಆಸುಪಾಸಿನಲ್ಲೆಲ್ಲಾ ಮನೆ ಕಟ್ಟೋಣಗಳು ಮೇಲೇಳುವುದರಿಂದ ಇಟ್ಟಿಗೆಗೆ ಬೇಡಿಕೆ ಇದ್ದೇ ಇರುತ್ತದೆ. ಮಳೆಗಾಲದಲ್ಲಿ ಕೃಷಿ ಕೆಲಸ ಮತ್ತು ಸಂಕ್ರಾಂತಿಯ ಸಮಯ ಧವಸ ಧಾನ್ಯಗಳು ಕಣದಿಂದ ಮನೆಗೆ ಬರುವ ಕಾಲವಾದ್ದರಿಂದ, ಆ ಸಮಯದಲ್ಲಿ ಮನೆ ಅಥವಾ ಇತರ ಕಟ್ಟಡಗಳ ನಿರ್ಮಾಣ ಇರುವುದಿಲ್ಲವಾದ್ದರಿಂದ ದೊರೆಸಾಮಿಯು ನಿರ್ದಾಕ್ಷಿಣ್ಯವಾಗಿ ಕೆಲಸದವರಿಗೆ 'ಕೆಲಸಕ್ಕೆ ಬರಬೇಡಿ' ಎಂದು ಹೇಳಿಬಿಡುತ್ತಾನಾದ್ದರಿಂದ ಇಟ್ಟಿಗೆ ಭಟ್ಟಿಯಲ್ಲಿ ಕೆಲಸವೂ ಇಲ್ಲ ಆದಾಯವೂ ಇಲ್ಲ ಎನ್ನುವಂತಾಗುತ್ತದೆ. ಆದರೆ, ಅರೆಬರೆಯಾಗಿ ಉಳಿದಿದ್ದ ಕಟ್ಟಡಗಳ ನಿರ್ಮಾಣದ ತೆವಲಿನ ಕಂಟ್ರಾಕ್ಟರುಗಳು ಆಗಾಗ ಇಟ್ಟಿಗೆಗೆ ಬೇಡಿಕೆ ಇಡುವುದರಿಂದ ಅಲ್ಪಸ್ವಲ್ಪ ವ್ಯಾಪಾರ ನಡೆಯುತ್ತಿರುತ್ತದೆ ಎನ್ನುವುದು ಸುಳ್ಳಲ್ಲ. ಭೀಮಣ್ಣ ಮತ್ತು ದೊರೆಸಾಮಿಯ ಜೋಡಿಯು ಈ ಸಮಯದಲ್ಲಿ ಸಿಕ್ಕುವ ಅಲ್ಲೊಂದು ಇಲ್ಲೊಂದು ಆರ್ಡರಿಗಾಗುವಷ್ಟು ಇಟ್ಟಿಗೆಯನ್ನು ಬೇಸಗೆಯಲ್ಲೆ ಹುಯ್ಯಿಸಿ ಗೂಡು ಕಟ್ಟಿ ಬೇಯಿಸಿಟ್ಟುಕೊಂಡಿರುವುದರಿಂದ ಅವರ ವ್ಯಾಪಾರವೇನೂ ನಿಲ್ಲುವುದಿಲ್ಲ. ಬಡತನವೇನಿದ್ದರೂ ಕೆಲಸಗಾರರಿಗೆ ಮಾತ್ರ.

ಹೀಗಾಗಿ ಇಟ್ಟಿಗೆ ಭಟ್ಟಿಯ ಕೆಲಸಗಾರರು ಮಳೆಗಾಲದಿಂದ ಸಂಕ್ರಾಂತಿಯವರೆಗಿನ ಕಾಲದಲ್ಲಿ ಜೀವನೋಪಾಯಕ್ಕೆ ಏನಾದರೂ ದುಡಿಮೆಗೆ ದಾರಿ ಮಾಡಿಕೊಳ್ಳಬೇಕಾಗುತ್ತದೆ. ಆ ಸಮಯದಲ್ಲಿ ಕೃಷಿ ಕಾರ್ಮಿಕರಾಗಿಯೋ ಅಥವಾ ಕಣಕ್ಕೆ ಧವಸ ತೂರುವ ಕೆಲಸಕ್ಕೆ ಹೋಗುವುದೋ ಏನಾದರೂ ಮಾಡಿಕೊಳ್ಳುತ್ತಾರೆ. ಕೆಲವರು ಇಟ್ಟಿಗೆ ಭಟ್ಟಿಯ ಕೆಲಸ ಮುಗಿದ ಮೇಲೆ ಸಂಜೆಗೆ ಯಾರದಾದರೂ ಉಳ್ಳವರ ಮನೆಗೆ ಕಸಮುಸುರೆಗೆ ಹೋಗಿ ಒಂದಷ್ಟು ದುಡಿದುಕೊಂಡು ಸಂಕಷ್ಟ ಕಾಲಕ್ಕೆ ಕೂಡಿಟ್ಟುಕೊಳ್ಳುತ್ತಾರೆ, ಅದೂ ಅವರ ಗಂಡನಾದವನು ಒಳ್ಳೆಯವನಾಗಿದ್ದು ದುಡ್ಡಿಗಾಗಿ ಹೆಂಡತಿಗೆ ಹೊಡೆದೂ ಬಡಿದೂ ಕಾಸು ಕೀಳದಿದ್ದರೆ. ರಾಮಕ್ಕನಿಗೆ ಭಟ್ಟಿಯ ಕೆಲಸದಿಂದ ಬರುತ್ತಿದ್ದ ಹಣವು ಮನೆಯ ಲವಾಜಮೆ ಖರ್ಚಿಗೆ ಮಾತ್ರ ಸಾಲುತ್ತಾ ಇದ್ದರೂ, ಮಕ್ಕಳು ಏನಾದರೂ ತೆಗೆಸಿಕೊಡಲು ಹಟ ಮಾಡಿದರೆ ಕೊಡಿಸಲಾಗದ ತನ್ನ ಬಡತನವನ್ನೂ ಮನೆ ನಿರ್ವಹಿಸಲು ಸಹಾಯ ಮಾಡದ ಗಂಡನನ್ನೂ ಬೈದುಕೊಳ್ಳುತ್ತಿದ್ದಳು. ಅವಳ ಗಂಡನು ಸಾಕಷ್ಟು ಗಟ್ಟಿಮುಟ್ಟಾಗಿದ್ದ ಆಳಾಗಿದ್ದರೂ ಒಂದಷ್ಟೂ ದುಡಿಯಲಾರದ ಸೋಮಾರಿಯಾಗಿದ್ದ. ಸದಾ ಬಿಸಿಲಿನಲ್ಲಿಯೆ ದುಡಿಯುವ ಬಿಸಿಲಲ್ಲಿ ಸುಟ್ಟು ಕಪ್ಪಾಗುವ ಆ ಹಳ್ಳಿಯ ಶ್ರಮಜೀವಿ ಜನರಿಗೆ ಅಪರೂಪವಾಗಿದ್ದ ಬಿಳಿ ಚರ್ಮ ಹಾಗೂ ಆಕರ್ಷಕ ಮೈಕಟ್ಟಿನ ಆತನಿಗೆ ಇನ್ನೊಬ್ಬರ ದುಡ್ಡಿನಲ್ಲಿ ಶೋಕಿ ಮಾಡುವುದು ಹವ್ಯಾಸವಾಗಿತ್ತೇ ಹೊರತು ದುಡಿದು ಹೆಂಡತಿ ಮಕ್ಕಳನ್ನು ಸಾಕುವ ಯೋಗ್ಯತೆಯಂತೂ ಇರಲಿಲ್ಲ. ಹಾಗಾಗಿ ರಾಮಕ್ಕನು ಮಕ್ಕಳ ಆಸೆ ಪೂರೈಸಲಾರದ್ದಕ್ಕೆ ದುಃಖಿಸುತ್ತಾ ತನ್ನ ಅದಾಯವನ್ನು ಹೆಚ್ಚಿಸಿಕೊಳ್ಳಲು ಬಿಡುವಿನ ಸಮಯದಲ್ಲಿ ಏನಾದರೂ 'ಪಾರ್ಟುಟೈಮು' ಕೆಲಸ ಸಿಕ್ಕುತ್ತದೋ ಎಂದು ಹುಡುಕಾಡಿಕೊಂಡಿದ್ದಳು.

ಹೀಗಿರುತ್ತಾ ಒಂದು ಮಳೆಗಾಲದಲ್ಲಿ ಇಟ್ಟಿಗೆ ಕೆಲಸವು ಇಲ್ಲದೆ ಗದ್ದೆ ನೆಟ್ಟಿ ಮಾಡುವ ಕೆಲಸಕ್ಕೆ ಹೋಗಿದ್ದಾಗ ಮಧ್ಯಾಹ್ನದ ಊಟದ ಬಿಡುವಿನಲ್ಲಿ ಅವಳ ಜೊತೆ ಕೆಲಸ ಮಾಡುತ್ತಿದ್ದ ಹೆಂಗಸೊಬ್ಬಳು 'ಯಾನಾದ್ರೂ ಕೇಮೆ ಇದ್ರೆ ಆಗ್ತಿತ್ತು ಅಂದಿದ್ಯಲ್ಲವ್ವ, ತಗಾ ಆಶ್ರಮದಾಗೆ ಬೆಳಗ್ಗೆ ಸಂಜೆ ಕಸ ಗುಡಿಸುವ ಕೇಮೆ ಇದ್ದದಂತೆ. ಆಶ್ರಮ ಏನೂ ದ್ವಡ್ಡದಿಲ್ಲ, ಬೆಳಗ್ಗೆ ಸಂಜೆ ಒಂದೊಂದು ಗಂಟೆ ಕಸ ಹೊಡದ್ರೆ ಒಂದಸ್ಟು ಕಾಸು ಸಿಕ್ತಾತು ನೋಡು' ಎಂದಳು. ಹೊಸತಾದ ಯಾವುದಾದರೂ ಒಂದು ಆದಾಯ ಮೂಲದ ತಡಕಾಟದಲ್ಲಿದ್ದ ರಾಮಕ್ಕಳಿಗೆ ಅದೊಂದು ಸುದ್ದಿ ಅಪ್ಯಾಯಮಾನವೆನ್ನಿಸಿತು. ಇಟ್ಟಿಗೆ ಭಟ್ಟಿಯ ಶ್ರಮದ ದುಡಿತದ ನಂತರ ಬರಿ ಕಸ ಹೊಡೆಯುವ ಕೆಲಸವಾದರೆ ಆರಾಮು ಎನ್ನಿಸಿ 'ಅಲ್ಲಿ ನಿಂಗ್ಯಾರು ಪರಿಚಯ ಇದ್ದಾರು? ನಾನಲ್ಲಿ ಯಾರನ್ನು ಕೇಳದೆ?' ಎಂದು ಕೇಳಿದಳು. 'ಏ... ನಂಗಾದ್ರೂ ಯಾರು ಗುರ್ತವರೆ? ನಂಗೆ ಹೇಳಿದ್ದು ಪಂಚಾಯ್ತಿ ಸೆಗೆಟ್ರಿ. ಆವಯ್ಯ ನಿಂಗೂ ಪರಿಚಯ ಅವ್ನಲ್ಲ, ಅವುನ್ನೆ ಕೇಳು, ಕರಕ ಹೋಗಿ ಆಶ್ರಮಕ್ಕೆ ಬುಟ್ಟಾನು' ಎನ್ನುತ್ತಾ ಮಾತು ಮುಗಿಸಿದಳು.

ಊರಲ್ಲಿ ಆಶ್ರಮ ಎಂದು ಕರೆಸಿಕೊಳ್ಳುತ್ತಿದ್ದರೂ